ಚಾಮುಂಡೇಶ್ವರಿ ವಿದ್ಯುತ್ ಸರಬರಾಜು
ನಿಗಮ ನಿಯಮಿತ
(ಕರ್ನಾಟಕ ಸ್ವಾಮ್ಯಕ್ಕೆ ಒಳಪಟ್ಟಿದೆ)
ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ರವರ ಕಛೇರಿ, ಕಾರ್ಯ ಮತ್ತು ಪಾಲನಾ ಉಪವಿಭಾಗ,
ರಾಮಕೃಷ್ಣನಗರ ಚಾ.ವಿ.ಸ.ನಿ.ನಿ., ಮೈಸೂರು.
ದೂರವಾಣಿ: 0821-2340292

**CHAMUNDESHWARI ELECTRICITY SUPPLY CORPORATION LIMITED**
*(A GOVERNMENT OF KARNATAKA UNDERTAKING)*
Office of the Asst. Executive Engineer(Ele.)., O&M Sub Division, Ramakrishnagar CESC, Mysuru
Web Site: www.cescmysore.org
E-mail ID: aeerknagara@cescmysore.org

Company Identity Number[CIN]:- U40109KA2004SGCO35177

ಕ್ರಮಾಂಕ: ಸಕಾನಿಇಂ(ವಿ)/ಸಇಂ(ತಾ)/ಆರ್‌ಕೆನ/ಉವಿ/2021-22/ 1219 ದಿನಾಂಕ: 4/9/21

## ಸಭಾ ನಡಾವಳಿ

ರಾಮಕೃಷ್ಣ ನಗರ ಉಪ ವಿಭಾಗದಲ್ಲಿ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ಕ), ವಿ. ವಿ ಮೊಹಲ್ಲಾ ವಿಭಾಗ, ಚಾವಿಸನಿನಿ, ಮೈಸೂರು ರವರ ಅಧ್ಯಕ್ಷತೆಯಲ್ಲಿ ದಿನಾಂಕ: 03.09.2021 ರಂದು ಸಂಜೆ 03:00 ಗಂಟೆಗೆ ಜನಸಂಪರ್ಕ ಸಭೆಯಲ್ಲಿ ಗ್ರಾಹಕರ ವಿದ್ಯುತ್ ಸಂಬಂಧಿತ ದೂರುಗಳು/ಕುಂದು ಕೊರತೆಗಳ ಕುರಿತ ಸಭಾ ನಡಾವಳಿಗಳು.

**ಹಾಜರಿದ್ದ ಅಧಿಕಾರಿ/ನೌಕರರು:-**

1. ಶ್ರೀಯುತ ಹೆಚ್ ಆರ್ ರಾವ್, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ಕ), ವಿ.ವಿ ಮೊಹಲ್ಲಾ ವಿಭಾಗ.
2. ಶ್ರೀಯುತ ಧರ್ಮೇಶ್ ಜಿ.ಪಿ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರಾಮಕೃಷ್ಣನಗರ ಉಪವಿಭಾಗ.
3. ಶ್ರೀಮತಿ ದಿವ್ಯ ಸಿ ಎನ್, ಸಹಾಯಕ ಇಂಜಿನಿಯರ್(ತಾಂ), ರಾಮಕೃಷ್ಣನಗರ ಉಪವಿಭಾಗ.
4. ಶ್ರೀಮತಿ ಕವಿತ, ಸಹಾಯಕ ಲೆಕ್ಕಾಧಿಕಾರಿ, ಕಂದಾಯ ಶಾಖೆ, ರಾಮಕೃಷ್ಣನಗರ
5. ಶ್ರೀಯುತ ರಾಘವೇಂದ್ರ, ಸಹಾಯಕ ಇಂಜಿನಿಯರ್(ವಿ),ವಿವೇಕಾನಂದ ಶಾಖೆ.
6. ಶ್ರೀಯುತ ಸುರೇಶ್, ಸಹಾಯಕ ಇಂಜಿನಿಯರ್(ವಿ), ಜಯಪುರ ಶಾಖೆ.
7. ಶ್ರೀಮತಿ ಜ್ಯೋತಿ ನಾಯಕ, ಕಿರಿಯ ಇಂಜಿನಿಯರ್(ವಿ), ಹಾರೋಹಳ್ಳಿ ಶಾಖೆ.
8. ಶ್ರೀಯುತ ಮಹದೇವ್ ಕಿರಿಯ ಇಂಜಿನಿಯರ್(ವಿ), ವಿವೇಕಾನಂದ ಶಾಖೆ

**ಹಾಜರಿದ್ದ ಗ್ರಾಹಕರು:-**

1. ಶ್ರೀ ಅಶ್ವಥ್ ನಾರಾಯಣ, ಸಲಹೆಗಾರರು, ಮೈಸೂರು.
2. ಶ್ರೀ ಎಂ ಮಹಾದೇವ, ವಿದ್ಯುತ್ ಗುತ್ತಿಗೆದಾರರು, ಮೈಸೂರು.
3. ಶ್ರೀ ವೆಂಕಟರಾಮು ಬಿ ವಿ, ವಿದ್ಯುತ್ ಗುತ್ತಿಗೆದಾರರು, ಮೈಸೂರು.
4. ಶ್ರೀ ಸುಬ್ಬೇಗೌಡ, ವಿದ್ಯುತ್ ಗುತ್ತಿಗೆದಾರರು, ಮೈಸೂರು.

**ಸಭೆಯಲ್ಲಿ ತಿಳಿಸಿದಂತಹ ಅಹವಾಲುಗಳು ಈ ಕೆಳಕಂಡತಿರುತ್ತವೆ.**

| ಕ್ರ. ಸಂ | ಅರ್ಜಿದಾರರ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆ | ವಿಷಯ | ಕ್ರಮ |
|---|---|---|---|
| 1. | ಸುಬ್ಬೇಗೌಡ 9945901430 | • ಕುವೆಂಪುನಗರದ ಅಮ್ಮಾ ಕಾಂಪ್ಲೆಕ್ಸ್ ಬಳಿ ಇರುವ ಇವರ ಮನೆ ಹಾಗೂ ಇತರೆ ಮೂರು ಬೀದಿಯ ಮನೆಗಳಿಗೆ ಅನೇಕ ಬಾರಿ ವಿದ್ಯುತ್ ಅಡಚಣೆ ಉಂಟಾಗಿರುವುದಾಗಿ | • ಇದಕ್ಕೆ ಸಹಾಯಕ ಇಂಜಿನಿಯರ್(ವಿ), ವಿವೇಕಾನಂದ ಶಾಖೆ ರವರು, ಪ್ರಸ್ತುತ ಸ್ಥಾವರಗಳು ಕುವೆಂಪುನಗರ ಉಪವಿಭಾಗದ ವ್ಯಾಪ್ತಿಗೆ ಬರುವ ಅರವಿಂದ 11 ಕೆವಿ ವಿದ್ಯುತ್ ಮಾರ್ಗಕ್ಕೆ ಬರುವುದಾಗಿ, ಹಾಗು ಸದರಿ |

| | | | |
|---|---|---|---|
| | | ಹಾಗೂ ಇದನ್ನು ಸರಿಪಡಿಸಿಕೊಡುವಂತೆ ಮನವಿ ಮಾಡಿದರು. | 11 ಕೆವಿ ವಿದ್ಯುತ್ ಮಾರ್ಗದಲ್ಲಿ ಕಾಮಗಾರಿ ನಡೆಯುತ್ತಿದ್ದುದರಿಂದ ಹೆಚ್ಚು ಅಡಚಣೆ ಆಗಿರುತ್ತದೆ. ಕಾಮಗಾರಿ ಮುಗಿದಿರುವುದರಿಂದ ಇನ್ನು ಮುಂದೆ ಅಡಚಣೆ ಆಗುವುದಿಲ್ಲವೆಂದು ತಿಳಿಸಲಾಯಿತು. |
| 2. | ಶ್ರೀ ಮಹಾದೇವ, 8971370910 | • ಸಂಪರ್ಕಿತ ಹೊರೆಯನ್ನು ಕಡಿಮೆಗೊಳಿಸಲು (Load Reduction) ಅಧಿಕೃತ ಜ್ಞಾಪನ ಪತ್ರ ಹೊರಡಿಸಿದ ದಿನಾಂಕದಿಂದ ಹೊಸ ಸಂಪರ್ಕಿತ ಭಾರದ ಬದಲಾಗಿ ಹಳೆಯ ಸಂಪರ್ಕಿತ ಭಾರಕ್ಕೆ ಬಿಲ್ಲನ್ನು ನೀಡುತ್ತಿರುವುದಾಗಿ ತಿಳಿಸಿದರು.<br>• ಪ್ರತಿ ತಿಂಗಳು ತಾತ್ಕಾಲಿಕ ವಿದ್ಯುತ್ ಸ್ಥಾವರಗಳನ್ನು ನವೀಕರಿಸಿಕೊಳ್ಳಲು ಗ್ರಾಹಕರಿಗೆ ಅನುಕೂಲವಾಗುವಂತೆ ದೂರವಾಣಿ ಸಂದೇಶದ ಮುಖಾಂತರ ಮಾಹಿತಿ ಒದಗಿಸುವಂತೆ ಕೋರಿದರು ಹಾಗು ನವೀಕರಿಸಲು ನೀಡುವ ಸಂಖ್ಯೆಗಳನ್ನು ಮಾಪಕದಲ್ಲಿ ನಮೂದಿಸಲು ಗ್ರಾಹಕರಿಗೆ ತೊಂದರೆಯಾಗುತ್ತಿರುವುದಾಗಿ ತಿಳಿಸಿದರು. | • ಇದಕ್ಕೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಕೆ.ಇ.ಆರ್.ಸಿ ನಿಯಮಾವಳಿ ಪ್ರಕಾರ ಸಂಪರ್ಕಿತ ಹೊರೆಯನ್ನು ಕಡಿಮೆಗೊಳಿಸಲು ಅಧಿಕೃತ ಜ್ಞಾಪನ ಪತ್ರ ಹೊರಡಿಸಿದ ದಿನಾಂಕದಿಂದ ಎರಡು ತಿಂಗಳ ವರೆಗೆ ಹಳೆಯ ಸಂಪರ್ಕಿತ ಭಾರಕ್ಕೆ FC ಮೊತ್ತವನ್ನು ಪಾವತಿಸಬೇಕಾಗಿ ಅದಾದ ನಂತರ ಹೊಸ ವಿದ್ಯುತ್ ಭಾರಕ್ಕೆ ಬಿಲ್ಲು ಬರುವುದಾಗಿ ತಿಳಿಸಿದರು.<br>• ಇದಕ್ಕೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ರಾಮಕೃಷ್ಣನಗರ ಉಪವಿಭಾಗರವರು ಈಗಾಗಲೇ ಇದರ ಬಗ್ಗೆ ಮೇಲಧಿಕಾರಿಗಳಿಗೆ ಪತ್ರ ವ್ಯವಹರಿಸಿವುದಾಗಿ ತಿಳಿಸಿದರು. |

ಅಂತಿಮವಾಗಿ ಸಭೆಗೆ ಹಾಜರಿದ್ದ ಎಲ್ಲಾ ಅಧಿಕಾರಿ/ಗ್ರಾಹಕರಿಗೆ ವಂದಿಸುತ್ತಾ ಸಂಜೆ 05:00 ಗಂಟೆಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ರಾಮಕೃಷ್ಣನಗರ ಉಪ ವಿಭಾಗ, ಚಾ.ವಿ.ಸ.ನಿ.ನಿ,
ಮೈಸೂರು.

ಪ್ರತಿಯನ್ನು:-

1. ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ), ಕಾ ತ್ತು ಪಾ , ಮೈಸೂರು ವೃತ್ತ, ಚಾವಿಸನಿನಿ ರವರ ದಯಾಪರ ಮಾಹಿತಿಗಾಗಿ.
2. ಕಾರ್ಯನಿರ್ವಾಹಕ ಇಂಜಿನಿಯರ್(ವಿ),ಕಾ ತ್ತು ಪಾ , ವಿ.ವಿ.ಮೊಹಲ್ಲಾ ವಿಭಾಗ, ಚಾವಿಸನಿನಿ, ಮೈಸೂರು ರವರ ದಯಾಪರ ಮಾಹಿತಿಗಾಗಿ.

Scanned with CamScanner